# ಓಂಕಾರ – ಬ್ರಹ್ಮಾಂಡದ ಉಸಿರಿನ ಉಸಿರು

ಜ.ಹೊ. ನಾರಾಯಣಸ್ವಾಮಿ

ಹಿಂದೂಧರ್ಮದ ಸಂಕೇತವಾಗಿ, ಪರಬ್ರಹ್ಮನನ್ನು ನಿರ್ದೇಶಿಸುವ ಮಂತ್ರವಾಗಿ 'ಓಂ' ಜಗತ್ಪ್ರಸಿದ್ಧವಾಗಿದೆ. ಉಪನಿಷತ್ತುಗಳಲ್ಲಿ, ಸಾಹಿತ್ಯದಲ್ಲಿ ಹಾಗೂ ಪ್ರಸಿದ್ಧ ಲೇಖಕರ ನುಡಿಗಳಲ್ಲಿ ಈ ಶಬ್ದವು ಅಭಿವ್ಯಕ್ತಗೊಂಡಿರುವ ರೀತಿಯನ್ನು ಸಂಗ್ರಹಿಸಿ ವಿವರಿಸಿರುವ ಲೇಖಕರು ಹಾಸನದ ನಿವಾಸಿಗಳು.

'ಓಂ' ಪುರಾತನರಿಂದ ನಮಗೆ ಬಳುವಳಿಯಾಗಿ ಬಂದಿರುವ ಒಂದು ವಿಶಿಷ್ಟ ಸ್ವರ. ಇದರ ಮಹತ್ವವನ್ನು ಅರಿತುಕೊಂಡರೆ ಈ ಬೀಜಾಕ್ಷರದಲ್ಲಿ ಬ್ರಹ್ಮಾಂಡ ಅಡಗಿರುವುದು ಗೋಚರವಾಗುತ್ತದೆ. 'ಓಂ' ಕೇವಲ ಒಂದು ಸ್ವರವಲ್ಲ, ಅದು ಸರ್ವಸ್ವ, ಸತ್ವವನ್ನು ಒಳಗೊಂಡು ಸತ್ವವನ್ನು ತುಂಬುವ ಒಂದು ದಿವ್ಯ ಶಕ್ತಿ. ಆದಕಾರಣ ಅದು ಪುರಾತನವಾದಂತೆ ನೂತನವೂ ಹೌದು. ಅದು ನಮ್ಮ ಉಸಿರಿನೊಂದಿಗೆ ಒಂದಾಗಿದೆ, ಬ್ರಹ್ಮಾಂಡದ ಉಸಿರಿನ ಉಸಿರಾಗಿದೆ. ಓಂಕಾರ ಆದಿಯ ಆದಿಯಾಗಿರುವಂತೆ ಅಂತ್ಯದ ಅಂತ್ಯವೂ ಆಗಿದೆ. ಓಂಕಾರವೆ ಸೃಷ್ಟಿ, ಸ್ಥಿತಿ, ಲಯ ಕೂಡ.

'ಓಂ' ಅನ್ನು ಕುರಿತು ಕೇವಲ ಮಾತನಾಡುವುದಕ್ಕಿಂತ ಅದನ್ನು ಅಭ್ಯಸಿಸಿ ಅದರಿಂದ ಉಂಟಾಗುವ ಅನುಭವದ ನಂತರ ಅಭಿಪ್ರಾಯ ವ್ಯಕ್ತಪಡಿಸುವುದು ಹೆಚ್ಚು ಸೂಕ್ತ. ಪ್ರಾಚೀನ ಎಂದಾಕ್ಷಣ ತಿರಸ್ಕಾರಕ್ಕೋ ಇಲ್ಲ ಪೂಜೆಗೋ ಗುರಿಯಾಗುತ್ತಿರುವ ಪ್ರಸ್ತುತ ಸಂದರ್ಭಕ್ಕಂತೂ ಇದು ಅತ್ಯಂತ ಅಗತ್ಯವಾದ ತಿಳಿವಳಿಕೆಯಾಗಿದೆ.

ಪ್ರಾಣಾಯಾಮದ ಆತ್ಮ ಪ್ರಣವ. ಪತಂಜಲಿ ಮಹರ್ಷಿ ಮೊಟ್ಟಮೊದಲಿಗೆ ಇದರ ಮಹತ್ವವನ್ನು ಕಂಡುಕೊಂಡ ಯೋಗಿ. ತನ್ನ ಯೋಗದ ಮೂಲಕ ಶರೀರದ ಮೇಲೆ ಪ್ರಯೋಗ ಮಾಡಿಕೊಂಡು, ಅದರ ವಿಶ್ವವ್ಯಾಪಕ ಶಕ್ತಿಯನ್ನು ಅನುಭವಿಸಿ, ಅರಿವು ಮಾಡಿಕೊಟ್ಟ ಮೊದಲಿಗ. ಯಾರು ಏಕಾಗ್ರಚಿತ್ತದಿಂದ 'ಓಂ' ಅನ್ನು ಅಭ್ಯಸಿಸುತ್ತಾರೆಯೋ ಅವರ ಚಿತ್ತವಿಕಾರಗಳು ತಿಳಿಯಾದ ಸರೋವರದಂತೆ ನಿರ್ಮಲವಾಗಿ, ಅವರಲ್ಲಿಯೇ ಸುಪ್ತವಾಗಿರುವ ಅವ್ಯಕ್ತ ಚೈತನ್ಯ ಜಾಗೃತಿಗೊಂಡು, ಪ್ರಕಾಶಿಸಲು ಸಾಧ್ಯವಾಗುತ್ತದೆ. ತನ್ಮೂಲಕ ವಿಶ್ವೈಕ್ಯ ಭಾವ ಸ್ಫುರಿಸುತ್ತದೆ. ಏನಿಲ್ಲದಿದ್ದರೂ ಕಡೆಯ ಪಕ್ಷ ಚಿತ್ತ ಚಾಂಚಲ್ಯದಿಂದ ದೂರವಾಗಿ ಏಕಾಗ್ರತೆ ಪ್ರಾಪ್ತವಾಗುತ್ತದೆ. ಏಕಾಗ್ರತೆ ದೈವೀಸುಖದ ಮೊದಲ ಸೋಪಾನ.

'ಓಂ' ಪ್ರಾಚೀನರಿಂದ ಹಿಡಿದು ಅರವಿಂದ, ಕುವೆಂಪು ಅವರಂಥ ಆಧುನಿಕರವರೆಗೆ ಹಬ್ಬಿ ತಬ್ಬಿ ಓಡಿದಿದೆ. ಅದರ ಮಹತ್ವವನ್ನು ಕುರಿತು ಕೊಂಚ ಸಾವಧಾನವಾಗಿ ತಿಳಿಯುವ ಪ್ರಯತ್ನ ಮಾಡೋಣ.

'ಓಂ' ಒಂದು ಬೀಜಾಕ್ಷರ. ಓಂಕಾರವೆಂದೂ, ಪ್ರಣವವೆಂದೂ ಇದನ್ನು ಕರೆಯುತ್ತಾರೆ. ಪ್ರಣವವೆಂಬುದು 'ನು' (ಸ್ತುತಿಸು, ಶಬ್ದ ಮಾಡು) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಅಲ್ಲದೆ ನಮಸ್ಕರಿಸು ಎಂಬ ಅರ್ಥವುಳ್ಳ 'ನಮ್' ಧಾತುವಿನಿಂದ ಬಂದು, ಮನುಷ್ಯನನ್ನು ಮೀರಿದ ಅಗೋಚರ ಶಕ್ತಿಗೆ ನಮಸ್ಕಾರಾತ್ಮಕವಾಗಿರುವುದರಿಂದ ಇದು ಪ್ರಣವವಾಗಿದೆ ಎಂದೂ ತಿಳಿದುಬರುತ್ತದೆ.

"ಮಹತ್ ಆದಿಯಲ್ಲಿ ಪ್ರಪ್ರಥಮ ಬಾರಿಗೆ ನಾಮದಂತೆ ವ್ಯಕ್ತವಾಗಿ ನಂತರ ಬ್ರಹ್ಮಾಂಡದ ಆಕಾರ ಧರಿಸಿದೆ. ಅದರ ಹಿಂದೆ ಸನಾತನವಾದ ಅವ್ಯಕ್ತ ಸ್ಫೋಟ ಅಥವಾ ಅದನ್ನು ಹೊರಗೆಡಹುವ ಶಬ್ದಬ್ರಹ್ಮವಿದೆ. ಇಂದ್ರಿಯಗಳಿಗೆ ಗೋಚರವಾಗುವಂತೆ ಬ್ರಹ್ಮಾಂಡದ ಸ್ವರೂಪದಲ್ಲಿ ಗೋಚರಿಸಲು ಇರುವ ಸ್ಫೋಟಕ್ಕೆ ಒಂದೇ ಒಂದು ಶಬ್ದಚಿಹ್ನೆ ಇದೆ. ಅದೇ 'ಓಂ'. ಶಬ್ದವನ್ನು ಅದಕ್ಕೆ ಸಂಬಂಧಪಟ್ಟ ಭಾವದಿಂದ ವಿಭಜಿಸಲು ಹೇಗೆ ಅಸಾಧ್ಯವೋ ಹಾಗೆ 'ಓಂ' ಅನ್ನು ಮತ್ತು ಸ್ಫೋಟವನ್ನು ಕೂಡ ನಾವು ಬೇರ್ಪಡಿಸಲಾರೆವು. ಓಂ ಎಂಬುದು ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವಂಥ ಶಬ್ದ ಚಿಹ್ನೆ, ಮತ್ತಾವುದೂ ಅದಕ್ಕೆ ಸಮಾನವಾದುದು ಇಲ್ಲ" ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ.

'ಓಂ'ಕಾರ ಗಾಯತ್ರಿಗಿಂತ ಪುರಾತನವಾದುದು ಅಷ್ಟೇ ಅಲ್ಲ, ಅದು ಗಾಯತ್ರೀ ಮಂತ್ರದ ಮೂಲ. ಓಂಕಾರದ ಮೂಲ ಸೂಚಿತವಾಗಿರುವುದು ಮುಂಡಕೋಪನಿಷತ್ತಿನ ಮೊದಲನೆ ಮಂತ್ರದಲ್ಲಿ– **ಓಮಿತ್ಯೇಕಾಕ್ಷರಮಿದಂ ಸರ್ವಂ** "ಇದೆಲ್ಲವೂ ಓಂ ಎಂಬ ಅಕ್ಷರವು". ಅದರ ಉಪವ್ಯಾಖ್ಯಾನವು ಹೀಗಿದೆ: ಹಿಂದೆ ಆಗಿಹೋದದ್ದು, ಈಗ ಇರುವುದು, ಮುಂದಿನದು ಇದೆಲ್ಲವೂ ಓಂಕಾರವೇ. ತ್ರಿಕಾಲಾತೀತವಾದುದು ಇನ್ನಾವುದಿದೆಯೋ ಅದೂ ಓಂಕಾರವೆ.

'ಓಂ'ಕಾರ ಚಿಂತಿಸಲ್ಪಟ್ಟ ಅಕ್ಷರಗಳಿಂದ ಹೊರಹೊಮ್ಮಿತು ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ. ಹೇಗೆ ಎಲೆಯ ನಾಳದಿಂದ ಎಲೆಯ ಭಾಗಗಳೆಲ್ಲ ವ್ಯಾಪಿಸಿವೆಯೋ ಹಾಗೆ ಚೈತನ್ಯಸ್ವರೂಪವಾಗಿರುವ ಓಂಕಾರದಿಂದ ಶಬ್ದಸಮೂಹವೆಲ್ಲ

ವ್ಯಾಪ್ತವಾಗಿದೆ. ಓಂಕಾರವೆ ಇದೆಲ್ಲವೂ ಆಗಿದೆ ಎಂದು ಓಂಕಾರದ ಮೂಲಸ್ವರೂಪದ ಬಗ್ಗೆ ಹೇಳಲಾಗಿದೆ.

ಓಂಕಾರವನ್ನು ಕುರಿತ ಪ್ರಸ್ತಾಪ ಕಠೋಪನಿಷತ್ತಿನಲ್ಲಿಯೂ ಬರುತ್ತದೆ. ಯಮ, ನಚಿಕೇತರ ಸಂವಾದದಲ್ಲಿ ಅದರ ಕಾಂತಿ ಅಭಿವ್ಯಕ್ತವಾಗಿದೆ. ನಚಿಕೇತ ಯಮನನ್ನು ಕೇಳುತ್ತಾನೆ: "ಧರ್ಮಕ್ಕಿಂತ ಭಿನ್ನವೂ, ಅಧರ್ಮಕ್ಕಿಂತ ಭಿನ್ನವೂ, ಭೂತ, ಭವಿಷ್ಯತ್ ಕಾಲಗಳಿಗಿಂತ ಭಿನ್ನವೂ, ಈ ಕಾರ್ಯಕಾರಣಗಳಿಗಿಂತ ಭಿನ್ನವೂ ಆದ ಯಾವುದನ್ನು ನೋಡಿರುವೆಯೋ ಅದನ್ನು ಹೇಳು." ಆಗ ಯಮಧರ್ಮ ಹೀಗೆಂದು ಹೇಳುತ್ತಾನೆ: "ಎಲ್ಲ ವೇದಗಳು ಯಾವ ಪದವನ್ನು ಪ್ರತಿಪಾದಿಸುತ್ತವೆಯೋ, ಎಲ್ಲ ತಪಸ್ಸುಗಳು ಯಾವುದನ್ನು ಕುರಿತು ಹೇಳುತ್ತವೆಯೋ, ಯಾವುದಕ್ಕಾಗಿ ಬಯಸುತ್ತ ಬ್ರಹ್ಮಚರ್ಯವನ್ನು ಆಚರಿಸುತ್ತಾರೆಯೋ ಆ ಪದವನ್ನು ನಿನಗೆ ಸಂಗ್ರಹವಾಗಿ ಹೇಳುತ್ತೇನೆ. ಇದು ಓಂ ಎಂಬುದು. ಈ ಅಕ್ಷರವೇ ಬ್ರಹ್ಮ. ಈ ಅಕ್ಷರವೇ ಪರ. ಈ ಅಕ್ಷರವನ್ನು ತಿಳಿದವನು ಯಾವುದನ್ನು ಬಯಸುತ್ತಾನೆಯೋ ಅವನಿಗೆ ಅದೇ ಲಭಿಸುವುದು."

ಮುಂಡಕೋಪನಿಷತ್‌ನ ಈ ಮಂತ್ರ ಓಂಕಾರದಲ್ಲಿ ಹುದುಗಿರುವ ವಿಶ್ವವ್ಯಾಪಕ ಶಕ್ತಿಯನ್ನು ಅರಿತು ಅದರಲ್ಲಿ ಬೆರೆತು ಒಂದಾಗುವ ಹಾದಿಗೆ ದಾರಿದೀಪವಾಗಿದೆ.

**ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ।**
**ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥**

"ಓಂಕಾರವು ಧನುಸ್ಸು, ಆತ್ಮವೇ ಬಾಣ, ಬ್ರಹ್ಮವು ಅದರ ಲಕ್ಷ್ಯ ಎಂದು ಹೇಳಲಾಗಿದೆ. ತಡವರಿಸದೆ ಗುರಿಗೆ ಹೊಡೆಯಬೇಕು. ಬಾಣದಂತೆ ತನ್ಮಯನಾಗಬೇಕು."

'ಓಂ'ಕಾರವನ್ನು ಕುರಿತು ಯಾರು ತನ್ನ ಅಂತ್ಯಕಾಲದವರೆಗೂ ಧ್ಯಾನಿಸುವನೋ, ಅವನು ಅದರಿಂದ ಯಾವ ಲೋಕವನ್ನು ಜಯಿಸುತ್ತಾನೆ? ಎಂದು ಪ್ರಶ್ನೋಪನಿಷತ್ತಿನಲ್ಲಿ ಸತ್ಯಕಾಮನು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಭಗವಾನ್ ಪಿಪ್ಪಲಾದರು, "ಯಾರು 'ಓಂ' ಎಂಬ ಅಕ್ಷರದಿಂದ ಪರಮ ಪುರುಷನನ್ನು ಧ್ಯಾನಿಸುವನೋ ಅವನು ಜ್ಯೋತಿರ್ಮಯನಾದ ಸೂರ್ಯನಲ್ಲಿ ಒಂದಾಗುತ್ತಾನೆ. ಅವನು ಶ್ರೇಷ್ಠನಾದ ಮತ್ತು ಎಲ್ಲ ಶರೀರಗಳಲ್ಲಿಯೂ ಪ್ರವೇಶಿಸಿರುವ ಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ" ಎಂದು ತಿಳಿಸುತ್ತಾರೆ. 'ಓಂ' ಎಂಬುದೆ ಇದೆಲ್ಲವೂ ಎಂದು ತೈತ್ತರಿಯೋಪನಿಷತ್ತಿನ ಎಂಟನೆಯ ಅನುವಾಕದಲ್ಲಿ ಹೇಳಿದೆ. "ಓಂಕಾರ ಪ್ರತೀಕನಾದ ಅಗ್ನಿಯನ್ನು, ಸಂಕಲ್ಪಾತ್ಮನನ್ನು ಸ್ಮರಿಸು" ಎಂದು ಬೃಹದಾರಣ್ಯಕ ಉಪನಿಷತ್ತು ತಿಳಿಸುತ್ತದೆ.

ಓಂಕಾರದ ಸ್ವರೂಪವನ್ನು ಕುರಿತು ಮಾಂಡೂಕ್ಯ ಉಪನಿಷತ್ತಿನಲ್ಲಿ ಬರುವ ಪ್ರಸ್ತಾಪವನ್ನು ಗೌಡಪಾದರು ತಮ್ಮ ಗೌಡಪಾದಕಾರಿಕೆಯಲ್ಲಿ ವಿಶದವಾಗಿ ಚರ್ಚಿಸಿದ್ದಾರೆ. 'ಅ'ಕಾರ, 'ಉ'ಕಾರ, 'ಮ'ಕಾರಗಳು ಕೂಡಿ ಓಂಕಾರವಾಗಿದೆ. 'ಅ'ಕಾರವು ವಿಶ್ವನಲ್ಲಿಗೆ ಒಯ್ಯುತ್ತದೆ, 'ಉ'ಕಾರವು ತೈಜಸನಲ್ಲಿಗೆ ಒಯ್ಯುತ್ತದೆ, 'ಮ'ಕಾರವು ಪ್ರಾಜ್ಞನಲ್ಲಿಗೆ ಒಯ್ಯುತ್ತದೆ. ಅಲ್ಲದೆ 'ಅ'ಕಾರವು ಸ್ಥೂಲ ಜಗತ್ತು, ಜಾಗ್ರದವಸ್ಥೆ ಮತ್ತು ವಿಶ್ವಗಳನ್ನು ಸೂಚಿಸುತ್ತದೆ. 'ಉ'ಕಾರವು ಸೂಕ್ಷ್ಮ ಜಗತ್ತು, ಸ್ವಪ್ನ ಮತ್ತು ತೈಜಸಗಳನ್ನು ಸೂಚಿಸುತ್ತದೆ. 'ಮ'ಕಾರವು ಜಗತ್ಕಾರಣ, ಸುಷುಪ್ತಿ ಮತ್ತು ಪ್ರಾಜ್ಞಗಳನ್ನು ಸೂಚಿಸುತ್ತದೆ.

ಓಂಕಾರವನ್ನು ಪಾದಶಃ ತಿಳಿದುಕೊಳ್ಳಬೇಕು. ಓಂಕಾರದಲ್ಲಿ ಮನಸ್ಸನ್ನು ಸೇರಿಸಬೇಕು. ಓಂಕಾರವು ನಿರ್ಭಯವಾದ ಬ್ರಹ್ಮವು. ಓಂಕಾರದಲ್ಲಿ ಸದಾ ಯುಕ್ತನಾಗಿರುವವನಿಗೆ ಎಲ್ಲಿಯೂ ಭಯವಿಲ್ಲ. ಓಂಕಾರವೇ ಅಪರಬ್ರಹ್ಮವು. ಓಂಕಾರವೇ ಪರಬ್ರಹ್ಮವು ಎಂದೂ ಹೇಳಲ್ಪಟ್ಟಿದೆ. ಅವ್ಯಯವಾದ ಓಂಕಾರಕ್ಕೆ ಪೂರ್ವವಿಲ್ಲ, ಅಂತರವಿಲ್ಲ, ಬಾಹ್ಯವಿಲ್ಲ, ಕಾರ್ಯವಿಲ್ಲ. ಸರ್ವಕ್ಕೂ ಓಂಕಾರವೇ ಆದಿ, ಮಧ್ಯ ಮತ್ತು ಅಂತ. ಹೀಗಾಗಿ ಓಂಕಾರವನ್ನು ಅರಿತವನು ತಕ್ಷಣವೇ ತನ್ನ ಆತ್ಮಭಾವವನ್ನು ಹೊಂದುತ್ತಾನೆ.

ಓಂಕಾರವನ್ನು ಎಲ್ಲರ ಹೃದಯದೊಳಗಿರುವ ಈಶ್ವರನೆಂದು ತಿಳಿಯಬೇಕು. ಸರ್ವವ್ಯಾಪಿಯಾದ ಓಂಕಾರವನ್ನು ಅರಿತುಕೊಂಡು ಧೀರನು ಶೋಕಿಸುವುದಿಲ್ಲ. ಮಾತ್ರೆ (ಕಾಲದ ಗಣನೆ) ಇಲ್ಲದುದೂ, ಅನಂತ ಮಾತ್ರೆಗಳುಳ್ಳದ್ದೂ, ದ್ವೈತದ ಉಪಶಮನವೂ, ಶಿವವೂ ಆದ ಓಂಕಾರವನ್ನು ಯಾರು ಅರಿಯುತ್ತಾನೆಯೋ ಅವನೇ ಋಷಿ, ಇತರರಲ್ಲ. ಓಂಕಾರದ ಉಪಾಸನೆಯ ಉದ್ದೇಶ ಸಾಧಕನನ್ನು ಸ್ಥೂಲದಿಂದ ಸೂಕ್ಷ್ಮಕ್ಕೆ ಕರೆದುಕೊಂಡು ಹೋಗಿ ಕೊನೆಗೆ ಲೋಕದ ಬಗೆಗಿನ ದ್ವೈತಜ್ಞಾನವನ್ನು ನಾಶಮಾಡುವುದೆ ಆಗಿದೆ. ಓಂಕಾರ ತನ್ನ ಉಗಮವನ್ನು 'ಅ'ಕಾರದಿಂದ ಪಡೆದಿದೆ. 'ಅ'ಕಾರದಲ್ಲಿ ಎಲ್ಲಕ್ಕಿಂತ ಕಡಿಮೆ ವಿಶೇಷಣವಿದೆ. ಆದಕಾರಣವೇ ಶ್ರೀಕೃಷ್ಣ ಗೀತೆಯಲ್ಲಿ ಅಕ್ಷರಗಳಲ್ಲಿ 'ಅ'ಕಾರ ನಾನೆ ಎನ್ನುತ್ತಾನೆ. ಎಂದರೆ ಎಲ್ಲದರಲ್ಲಿಯೂ ಸ್ವಯಂಭೂ ಆಗಿರುವ ಚೇತನ ಅದೇ ಆಗಿದೆ.

ಪ್ರಾಚೀನ ಸಾಹಿತ್ಯದಲ್ಲಿಯೂ ಓಂಕಾರ ವಿವಿಧ ಸ್ವರೂಪಗಳಲ್ಲಿ ತನ್ನ ವ್ಯಾಪಕತೆಯನ್ನು ಪ್ರಕಟಿಸಿಕೊಂಡಿದೆ. ಅಭಿನವ ಮಂಗರಾಜ ತನ್ನ **ಅಭಿನವಾಭಿಧಾನಂ** ಎಂಬ ಕೃತಿಯಲ್ಲಿ 'ಪ್ರಣವಮೋಂಕಾರವಕ್ಕುಂ' ಎಂದಿದ್ದಾನೆ. ಪಂಪಮಹಾಕವಿ ತನ್ನ **ಆದಿಪುರಾಣ** ಗ್ರಂಥದಲ್ಲಿ "ಓಂಕಾರ ಶಂಕಾಕಾರ ವಿಜಯಪ್ರಸ್ಥಾನನಾಂದಿ ಸಮಯ ನಿನದಾನಂದಿತ ದಿಕ್ಪಾಳಚಕನುಂ" ಎಂದು ಹಾಡಿದಾನೆ. ಷಡಕರದೇವ ತನ್ನ

**ರಾಜಶೇಖರ ವಿಳಾಸಂ** ಕೃತಿಯಲ್ಲಿ 'ಕಾಲಾಂತಕಂ ಶಂಕರ–ನೋಂಕಾರಂ'—ಲಯಕರ್ತನಾದ ಶಂಕರ ಓಂಕಾರಸ್ವರೂಪನೇ ಎಂದು ವ್ಯಕ್ತಪಡಿಸುತ್ತಾನೆ. ಶಿವಪ್ಪಶಾಸ್ತ್ರಿ ಸಂಪಾದಿತ ಗುಬ್ಬಿಯ ಮಲ್ಲಣಾರ್ಯರ **ವೀರಶೈವಾಮೃತ ಪುರಾಣ**ದಲ್ಲಿ 'ವಿಶ್ವಪ್ರಕೃತಿ ರೂಪಮೆನಿಪ ಓಂಕಾರಮೂರ್ತಿಗೆ ವ್ಯೋಮಶಕ್ತಿಗೆ ನಮೋ ನಮೋ' ಎಂದು ಓಂಕಾರಕ್ಕೆ ನಮನ ಸಲ್ಲಿಸಲಾಗಿದೆ.

ಓಂಕಾರ ಆಧುನಿಕ ಸಾಹಿತ್ಯದಲ್ಲಿಯೂ ಆವಿರ್ಭವಿಸಿರುವ ಬಗೆ ಬಹಳ ವಿಸ್ಮಯಕರವಾಗಿದೆ. ಅದರ ಅಂತಃಶ್ಶಕ್ತಿಯನ್ನು ಅರಿತ ಸ್ವಾಮಿ ವಿವೇಕಾನಂದರು ಓಂಕಾರವನ್ನು ಕುರಿತು ಬರೆಯುತ್ತಾರೆ: "ಅದು ಕಠೋಪನಿಷತ್ತಿನ ಸಾರವನ್ನು ಹೀರಿ ನಿಂತ ಶಕ್ತಿವಾಣಿ. ಆ ವಾಣಿ ಎಂದರೆ 'ಯಾವುದನ್ನು ಎಲ್ಲಾ ವೇದಗಳು ಸಾರುವವೋ, ಯಾವುದಕ್ಕಾಗಿ ಎಲ್ಲರೂ ತಪಸ್ಸನ್ನು ಮಾಡುವರೋ, ಯಾವುದನ್ನು ಪಡೆಯುವುದಕ್ಕೆ ಜನರು ಬ್ರಹ್ಮ ಚರ್ಯವನ್ನು ಆಚರಿಸುವರೋ ಅದನ್ನು ಒಂದು ಪದದಲ್ಲಿ ಹೇಳುತ್ತೇನೆ; ಅದೇ ಓಂ.' ವೇದಗಳು ಈ ಪದವನ್ನು ಶ್ಲಾಘಿಸು ತ್ತವೆ ಎಂದು ಭಾವಿಸಲಾಗಿದೆ."

'ಓಂ' ಅನ್ನು ನೊಬೆಲ್ ಪಾರಿತೋಷಕ ವಿಜೇತ ಜರ್ಮನಿಯ ಹರ್ಮನ್ ಹೆಸ್ ತನ್ನ ಕಾದಂಬರಿ 'ಸಿದ್ಧಾರ್ಥ' ದಲ್ಲಿ ಅದ್ಭುತವಾಗಿ ಬಳಸಿದ್ದಾನೆ. ಆ ಕಾದಂಬರಿಯಲ್ಲಿ ಬರುವ ನಾಯಕ ಸಿದ್ಧಾರ್ಥ ಮತ್ತು ವಾಸುದೇವರ ನಡುವೆ ನಡೆಯುವ ಸಂಭಾಷಣೆಯನ್ನು ಗಮನಿಸಿ:

**ಸಿದ್ಧಾರ್ಥ ಹೇಳಿದ:** 'ನದಿ ನಾದಮಯ ಎಂಬುದು ನಿಜವಲ್ಲವೇ ವಾಸುದೇವ? ಅದು ರಾಜನ, ಸೈನಿಕನ, ಗೂಳಿಯ, ಮೈನಾಹಕ್ಕಿಯ, ಗರ್ಭಿಣಿಯ, ಹಾಡುವ ಮನುಷ್ಯನ ದ್ಯಾವಾಪೃಥಿವಿಯ ಸ್ವರಗಳಲ್ಲವೆ?'

**ವಾಸುದೇವ:** 'ಹೌದು, ಬದುಕಿರುವ ಜೀವಗಳೆಲ್ಲದರ ಸ್ವರವು ಅದರ ಸ್ವರವೇ ಆಗಿದೆ.'

**ಸಿದ್ಧಾರ್ಥ:** 'ಒಂದೇ ಕಾಲದಲ್ಲಿ ಸಾವಿರಾರು ಸ್ವರಗಳನ್ನು ಕೇಳು ವುದರಲ್ಲಿ ಯಾರಾದರೂ ಜಯಶೀಲರಾದರೆ ಅದು ಯಾವ ನಾದ ವನ್ನು ಧ್ವನಿಸುತ್ತದೆ?'

ವಾಸುದೇವ ಸಿದ್ಧಾರ್ಥನತ್ತ ಬಾಗಿ ಅವನ ಕಿವಿಯಲ್ಲಿ ಉಚ್ಚರಿ ಸಿದ: 'ಓಂ...'. ಸಿದ್ಧಾರ್ಥ ಗಮನವಿಟ್ಟು ನದಿಯನ್ನು ಆಲಿಸಿದಾಗ, ಅದರ ಸಾವಿರಾರು ಸ್ವರಗಳನ್ನು ಕೇಳಿದಾಗ, ಸುಖದುಃಖಗಳಿಗೆಡೆ ಗೊಡದೆ ಯಾವುದೇ ಒಂದು ಸ್ವರಕ್ಕೆ ಒಲಿದು ಒಳಗಾಗದೆ, ಗಣನೆಗೆ ತೆಗೆದುಕೊಳ್ಳಬಹುದಾದ ಎಲ್ಲವನ್ನೂ ಸೂಚಿಸುವ ಆ ಸಾವಿರ ಸ್ವರಗಳು ಪರಮೋತ್ಕೃಷ್ಟವಾದ ಒಂದು ಪದವನ್ನು ಒಳಗೊಂಡಿವೆ. ಅದೇ ಪರಿಪೂರ್ಣವಾದ ಓಂ. ವಾಸುದೇವನ ಮುಖದಲ್ಲಿ ಪ್ರಕಾಶವಿತ್ತು. ನದಿಯ ಎಲ್ಲ ಸ್ವರಗಳಲ್ಲಿ ಓಂ ಸುಳಿಯುವಂತೆ ಅವನ ವೃದ್ಧ ಮುಖದ ನೆರಿಗೆಗಳಲ್ಲಿ ಪ್ರಕಾಶ ಸುಳಿದಾಡುತ್ತಿತ್ತು.

ಓಂ ವಿಶ್ವವನ್ನು ವ್ಯಾಪಿಸಿ ನಿಂತಿರುವುದನ್ನು ಕುರಿತು ಹರ್ಮನ್ ಹೆಸ್ ವ್ಯಕ್ತಪಡಿಸಿರುವ ಬಗೆ ರೋಮಾಂಚನಕಾರಿ ಯಾದುದು.

ಓಂಕಾರ ತನ್ನ ಆಳ ಅಗಲ ಎತ್ತರಗಳನ್ನು ವಿಸ್ತರಿಸಿ ಕೊಂಡು, ಅಂತರ್ಗತವಾಗಿ ಹರಿದಿರುವುದನ್ನು ಕನ್ನಡದ ಮಹಾಕವಿ ಕುವೆಂಪು ಅವರ ಸಾಹಿತ್ಯದಲ್ಲಿಯೂ ಕಾಣ ಬಹುದು. ಕುವೆಂಪು ಅವರ ಆರಂಭದ ಪ್ರೇಮಗೀತೆಗಳಲ್ಲಿ ಸಹಧರ್ಮಿಣಿಯನ್ನು ಕುರಿತು ಬರೆಯುವಾಗ 'ಅನುತ್ತರಾ' ಕವನದಲ್ಲಿ "ನನ್ನ ದೇವಿ/ ಜಗನ್ಮಾತೆ/ ಆದಿಶಕ್ತಿ/ ಮಹಾಮಾಯೆ/ ಅನುತ್ತರಾ/ ಓಂ...!" ಎಂದು ಪ್ರೀತಿಯು ಸರ್ವವ್ಯಾಪಿ ಯಾಗಿರುವುದನ್ನು ಅಭಿವ್ಯಕ್ತಿಸಿದ್ದಾರೆ.

ಓಂಕಾರ ರಸಸಿದ್ಧಿ ತನ್ನ ಪರಿಪೂರ್ಣ ಅವತಾರದಲ್ಲಿ ಸಿದ್ಧಿಸಿರುವುದು ಅವರ ಮೇರುಕೃತಿಯಾದ **ಶ್ರೀರಾಮಾಯಣ ದರ್ಶನಂ**ನಲ್ಲಿ. ಓಂಕಾರ ಅಲ್ಲಿ ರಸದ ಮಡುವಾಗಿದೆ. 'ಶಿಲಾತಪಸ್ವಿ'ಯಲ್ಲಿ ಉಗಮಗೊಂಡು "ರಯ್‌ಗೆ ಕರೆದೊಯ್ ಓ ಅಗ್ನಿ"ಯಲ್ಲಿ ಝೋಂಕರಿಸಿ ಉಕ್ಕಿಹರಿದು 'ಅಭಿಷೇಕ ವಿರಾಟ್ ದರ್ಶನಂ'ನಲ್ಲಿ ಅಂತರ್ಗತವಾಗಿ ಸುಷುಪ್ತಿ ಮಹಾಮೌನದಲ್ಲಿ ಲಯವಾಗಿದೆ."

ಶಾಪಗ್ರಸ್ತ ಅಹಲ್ಯೆ ಶಿಲೆಯಾಗಿ ಬಿದ್ದಿದ್ದ ತಾಣದೆಡೆಗೆ ಶ್ರೀರಾಮ ಹೋಗುವಾಗ ಅವನಲ್ಲಿ ಚಿನ್ಮಯಾವೇಶ ಮೂಡಿ, ವನ್ಯಮೃಗ, ಪಕ್ಷಿಸಂಕುಲಗಳ ನಾಳನಾಳಗಳಲ್ಲಿ ಶಕ್ತಿ ಸಂಚರಿಸಿ ಇಡೀ ಸೃಷ್ಟಿಯೇ ಓಂಕಾರ ಧ್ವನಿಯಾಗಿ ಧ್ವನಿಸಿದ್ದನ್ನು, "....ಪಕ್ಕಿಯಿಂಚರದೊಡನೆ ಸಂಗಮಿಸಿ ತುಂಬಿ ಮೊರೆ ತುಂಬಿ ಝೋಂಕರಿಸಿತೋಂಕಾರಮಂ" ಎಂದು ದುಂಬಿಗಳು ಓಂಕಾರ ರವದೊಂದಿಗೆ ಇಡೀ ಸೃಷ್ಟಿಯನ್ನು ಚಿನ್ಮಯಗೊಳಿಸಿದ್ದನ್ನು ಕವಿ ರಸಾನುಭೂತಿಯಿಂದ ವರ್ಣಿಸಿದ್ದಾರೆ.

ಶ್ರೀಸಂಪುಟದ 'ರಯ್‌ಗೆ ಕರೆದೊಯ್, ಓ ಅಗ್ನಿ!' ಸಂಚಿಕೆ ಯಲ್ಲಿ ಸೀತೆ ಅಗ್ನಿಪ್ರವೇಶ ಮಾಡಿದಾಗ ಆಕೆಯಂತೆ ತಾನೂ ಚಾರಿತ್ರ್ಯಶುದ್ಧ ಎಂಬುದನ್ನು ಜಗತ್ತಿಗೆ ಮನವರಿಕೆ ಮಾಡಲು ಶ್ರೀರಾಮನು ತನ್ನನ್ನು ತಾನು ಪರೀಕ್ಷೆಗೆ ಒಡ್ಡಿಕೊಳ್ಳುತ್ತಾನೆ. ಸೀತೆ ಅಗ್ನಿಪ್ರವೇಶ ಮಾಡುವುದನ್ನು ನೋಡುತ್ತಿದ್ದ ರಾಮನನ್ನು ಕುರಿತು ಕುವೆಂಪು "ನಿಟ್ಟಿಸುತ್ತಿರ್ದ ರಾಮಾನನಂ ತಾನಾಯ್ತು ದೀಪ್ಯಮಾನಂ. ಚಲಿಸಿದನು ಚಿತೆಗೆ". ಶ್ರೀರಾಮ ಸೀತೆ ಇಬ್ಬರೂ ಅಗ್ನಿಯಲ್ಲಿ ಲಗ್ನವಾಗಿರಲು ಇಡೀ ಸೃಷ್ಟಿಯೇ ಕಾಂತಿ ಮಯವಾಗಿ ವಿವಿಧ ಜ್ಯೋತಿಗಳಿಂದ ಜ್ಯೋತಿರ್ಮಯ ವಾಗಿರಲು ಶ್ರೀವಾಣಿಗಳು ಹೀಗೆ ಹೊರಹೊಮ್ಮುತ್ತವೆ: "ಓಂ ನಮೋ ಸಚ್ಚಿದಾನಂದನೆ ನಮೋ ನಮೋ, ಓಂ ನಮೋ ಸರ್ವಸ್ವತಂತ್ರನೆ ನಮೋ ನಮೋ! ಆದಿ ಆದಿಯೆ ನಮೋ,

ಅಂತ್ಯದಂತ್ಯವೆ ನಮೋ! ಆದ್ಯಂತದಾಚೆಗಿರುವಾತನೇ ನಮೋ ನಮೋ! ಓಂ ಸ್ವಯಂಪ್ರಭು ನಮೋ! ಓಂ ಋತಪ್ರಭು ನಮೋ! ಓಂ ನಮೋ ಸರ್ವಲೋಕಸ್ವಾಮಿ ನಮೋ ನಮಃ!"

'ಓಂಕಾರ ಮುಖ' ಎಂದೇ ಆರಂಭವಾಗುವ ಶ್ರೀಸಂಪುಟದ 'ಅಭಿಷೇಕ ವಿರಾಟ್‌ದರ್ಶನಂ' ತನ್ನ ಅಂತ್ಯದಲ್ಲಿ "ಓಂ ನಮೋ, ಓಂ ನಮಃ! ಓಂ ಶಾಂತಿ–ಶ್ಯಾಂತಿ–ಶ್ಯಾಂತಿಃ!" ಎಂದು ಓಂಕಾರ ಮೊಂದಿಗೆ ಕೊನೆಗೊಳ್ಳುತ್ತದೆ. ಅಲ್ಲಿ ಕವಿಯ ಎದುರು ನಿಲ್ಲುವುದು 'ನಿರಾಕಾರನೋರ್ವಂ!' ತನು ಸೂಕ್ಷ್ಮಂ; ಆ ನಿರಾಕಾರವು ಕವಿಗೆ ಅತೀಂದ್ರಿಯವಾದುದನ್ನು ಅರಿವು ಮಾಡಿ, ಮಿಥ್ಯೆಯನ್ನು ಮೀರಿದ ಸತ್ಯಲೋಕದ ದರ್ಶನ ಮಾಡಿಸಿದಾಗ ರಸವಶನಾದ ಕವಿ "ರಸವಶಂ ನೋಡು ತಿರಲಾಂ, ಬಂದುದೊಯ್ಯೊಯ್ಯನೆಯ ಕಿವಿಗೆ, ಬಹುದೂರ ದಿಂದೆನೆ, ಸಮುದ್ರಮಂದ್ರಮದೊಂದು ರುಂದ್ರ ಜಯಗಾಥೆಯ ಮಹಾನಿನಾದಂ; 'ಕಂದ ಕೇಳ್!' ಕರುಣೆಯಿಂದೊರೆದುದಿಂತಾ ಗುರುಕೃಪಾವಾಣಿ, "ಮಾನವನ ಕಿವಿಯಾಲಿಸಲ್ಕರಿಯದೀ ಸೃಷ್ಟಿಗಾಥೆಯಂ, ನಿತ್ಯರಾಮಾಯಣದ ರಾಮರಿಗೆ ನಿಚ್ಚಮುಂ ನಡೆವ ಪಟ್ಟೋತ್ಸವ ಸ್ತೋತ್ರಮಂ, ಆಲಿಸದೊ! ಸ್ಥಾವರದಿ, ಜಂಗಮದಿ, ಜಡಜೀವಚೇತನ ಚರಾಚರದೊಳಣು ರೇಣು ತೃಣಕಾಷ್ಠ ಕೋಟಿ ಕೋಟಿಯ ಕಂಠದಿಂದೇಳುವಾನಂದ ಗೋಷ್ಠಿಗಾನಂ! ಗುರುಕೃಪೆಯೊಳಾನಿಸಿದೆ ನಾಂ, ಅವಾಙ್ಮನೋ–ಗೋಚರವನಖಿಲ ಶಬ್ದಾಬ್ಧಿಯಂ, ಸರ್ವ ಸಂಗೀತ ಯೋಗದ ಚರಮಸಿದ್ಧಿಯಂ ಶಿಲೆಗಳಲಿ ಜಲಗಳಲಿ ಲೋಹಲೋಹಗಳಲ್ಲಿ, ಖಗಗಳಲಿ, ಮೃಗಗಳಲಿ ನಾನಾ ನರಸ್ವರಕಲಾ ಸಕಲ ವಿನ್ಯಾಸದಲಿ ಮರ್ತ್ಯೇಂದ್ರಿಯಂಗಳಿಗೆ ಪ್ರತ್ಯಕ್ಷ ಮಾಗುತಿರ್ಪೋಂಕಾರಮಂ! ಘನಂ ದ್ರವಮಾಗುವೋಲುರಿಗೆ ಕಪ್ಪುರಂ ಕರಗುವೋಲ್ ಕರಗಿದನು ಗುರು, ತಾನುಮೋಂಕಾರ ಲಯನಾಗಿ ನನ್ನೀ ಕೃತಿಯ ಮಹಾ ಛಂದಸ್ ಶ್ರೀಲಯಗತಿಯವೋಲ್!"

ಓಂಕಾರರೂಪಿಯಾದ ಅವ್ಯಕ್ತ ಶಕ್ತಿಯೊಂದು ಮಾನವನ ಹಿಡಿತಕ್ಕೆ ಸಿಗದೆ ಎಲ್ಲದರ ಹೃದಯದಲ್ಲಿ ಸುಪ್ತವಾಗಿದೆ. ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ 'ಪರಿಪೂರ್ಣದೆಡೆಗೆ' ಕಾದಂಬರಿಯು ಕೂಡ ಪ್ರಾರಂಭವಾಗಿರುವುದು 'ಓಂಕಾರದ ತುಂಬು ನಾದದಂತೆ' ಎಂದೇ. ಅಂದರೆ ಅದರ ಉದ್ದೇಶವೂ ಅವ್ಯಕ್ತವಾಗಿರುವ ಅನಂತ ಶಕ್ತಿಯನ್ನು ಅರಸುವುದು ಮತ್ತು ಅಂತ್ಯದಲ್ಲಿ ಅದೇ ಆಗುವಿಕೆಯ ಧ್ವನಿಸಂಕೇತವಾಗಿ ಅದು ಪ್ರಾರಂಭವಾಗಿದೆ.

'ಓಂ ಭೂರ್ಭುವಸ್ಸುವಃ ತತ್ ಸವಿತುರ್ವರೇಣ್ಯಂ' ಎಂದು ಪ್ರಾರಂಭವಾಗುವ ಮಹರ್ಷಿ ವಿಶ್ವಾಮಿತ್ರಕೃತ ಗಾಯತ್ರೀ ಮಂತ್ರವೂ ಬೀಜಾಕ್ಷರವಾದ ಓಂಕಾರದಿಂದಲೇ ಪ್ರಾರಂಭ ವಾಗುತ್ತದೆ.

ಒಟ್ಟಿನಲ್ಲಿ ನಮ್ಮ ಅರಿವನ್ನು ಮೀರಿದ **ಅವ್ಯಕ್ತ ಶಕ್ತಿ**ಯೊಂದು ಜಗತ್ತನ್ನೆಲ್ಲಾ ಆವರಿಸಿಕೊಂಡಿದೆ. ಅದೇ ಇದು ಎಂದು ಪದಗಳಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಗದ, ಮಾನವ ಮಿತಿಯನ್ನೂ ಮತಿಯನ್ನೂ ಮೀರಿದ ಆ ಶಕ್ತಿಯನ್ನು 'ಓಂ' ಎಂದು ಕರೆಯಲಾಗಿದೆ. ಅದು ಪುರೋಹಿತರು ಹೇಳುವ ಅರ್ಥದ ಮಂತ್ರಶಕ್ತಿ ಅಲ್ಲ; ಬದಲಿಗೆ ಅವರವರ ಭಾವಕ್ಕೆ ತಕ್ಕಂತೆ ಅವರವರ ಶಕ್ತಿಯನ್ನು ಜಾಗೃತಗೊಳಿಸುವ, ವಿಸ್ತಾರ ಗೊಳಿಸುವ, ವಿಶ್ವವ್ಯಾಪಕಗೊಳಿಸುವ ಶಕ್ತಿಸಂಕೇತ ಮಾತ್ರ.

ಓಂಕಾರಸ್ವರೂಪಿಯಾದ ಚೇತನ ಜಗತ್ ಶರೀರವೇ ತಾನಾಗಿ ಜಡಜೀವ, ಚರಾಚರದೊಳಣುರೇಣುತೃಣಕಾಷ್ಠ ಗಳಲ್ಲೆಲ್ಲಾ ಸುಪ್ತ ಶಕ್ತಿಯಾಗಿದೆ. ಬದುಕಿನಲ್ಲಿ ಅದನ್ನು ಜಾಗೃತಗೊಳಿಸಿಕೊಂಡರೆ ಆ ಬದುಕು ಕಲ್ಪ; ಇಲ್ಲದಿದ್ದರೆ ಅಲ್ಪ! ಏಕೆಂದರೆ ಅಲ್ಪದಲ್ಲಿ ಸುಖವಿಲ್ಲ, **ನಾಲ್ಪೇ ಸುಖಮಸ್ತಿ!**

## ರಾಷ್ಟ್ರನಿರ್ಮಾಪಕರು

**ಭದ್ರಮಿಚ್ಛಂತ ಋಷಯಃ ಸ್ವರ್ವಿದಃ**
**ತಪೋದೀಕ್ಷಾಮುಪಸೇದುರಗ್ರೇ ।**
**ತತೋ ರಾಷ್ಟ್ರಂ ಬಲಮೋಜಶ್ಚ ಜಾತಂ ತದಸ್ಮೈ**
**ದೇವಾ ಉಪಸಂ ನಮಂತು** ॥ (ಅಥರ್ವ.೧೯–೪೧–೧)

(ಸಕಲಲೋಕದ ಕಲ್ಯಾಣವನ್ನಿಚ್ಛಿಸುವ ಆತ್ಮಜ್ಞಾನಿ ಋಷಿಗಳು ಮೊಟ್ಟಮೊದಲು ತಾವು ದೀಕ್ಷೆ ವಹಿಸಿ, ತಪಸ್ಸನ್ನಾಚರಿಸಿದರು. ಅದರಿಂದ ರಾಷ್ಟ್ರ ಬಲ, ಓಜಸ್ಸು ಹುಟ್ಟಿದವು. ಅಂತೆಯೆ ಇಂತಹ ರಾಷ್ಟ್ರವನ್ನು ದೇವತೆಗಳು ಕೂಡ ಪೂಜಿಸುವರು.)

ಸ್ವಾತಂತ್ರ್ಯ ಸಿಕ್ಕಿದೆ, ಸ್ವರಾಜ್ಯ ಸಿಕ್ಕಿದೆ; ವೇದೋಕ್ತ ರಾಷ್ಟ್ರಭಾವ ಇನ್ನೂ ಒಡಮೂಡಬೇಕಾಗಿದೆ. ಋಷಿಗಳು ದೀಕ್ಷೆ ತೊಟ್ಟು ತಪಗೈದರು; ಅದರಿಂದ ಭಾರತವೆಂಬ ರಾಷ್ಟ್ರ ನಿರ್ಮಾಣವಾಯಿತಲ್ಲದೆ, ಅದರಲ್ಲಿ ಬಲ ಓಜಸ್ಸುಗಳೂ ತುಂಬಿಕೊಂಡವು, ದೇವತೆಗಳು ಕೂಡ ಅದನ್ನು ಪೂಜಿಸಿದರು. ಬಲಯುತವಾದ ನಮ್ಮೀ ರಾಷ್ಟ್ರವನ್ನು ಮತ್ತೆ ತೇಜಸ್ಸು ಓಜಸ್ಸುಗಳಿಂದ ಪುನರುಜ್ಜೀವಿಸಬೇಕಾದರೆ, ಕೆಲವರಾದರೂ ಋಷಿಗಳ ದಾರಿಯಲ್ಲಿ ನಡೆಯಬೇಕು. ಅಧಿಕಾರದ ವ್ಯಾಮೋಹ ತೊರೆದು ಭಾರತೀಯರ– ಅದೇಕೆ ಮಾನವ ಮಾತ್ರರ ಕಲ್ಯಾಣವೊಂದನ್ನೇ ಚಿಂತಿಸುತ್ತ, ಏಕಾಗ್ರಚಿತ್ತರಾಗಿ ತಪಗೈಯುತ್ತ, ತಮ್ಮ ಆತ್ಮಶಕ್ತಿಯನ್ನು ಸಂಗ್ರಹಿಸುತ್ತ ದೇಶಕ್ಕೆ, ಜಗತ್ತಿಗೆ ಅದನ್ನು ದಾನ ಮಾಡಬೇಕು.